ಶ್ರೀ ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು)

ಅ) 2000–2001 ನೇ ಸಾಲಿನಲ್ಲಿ ರೂ. 416.80 ಲಕ್ಷಗಳು
2001–2002ನೇ ಸಾಲಿನಲ್ಲಿ ರೂ. 410.46 ಲಕ್ಷಗಳು
2002–02003ನೇ ಸಾಲಿನಲ್ಲಿ ರೂ.. 441.51 ಲಕ್ಷಗಳು

ಒಟ್ಟು ರೂ. 1268.77 ಲಕ್ಷಗಳು

ಆ) 2000–2001 ನೇ ಸಾಲಿನಲ್ಲಿ ರೂ. 1538.96 ಲಕ್ಷಗಳು
2001–2002ನೇ ಸಾಲಿನಲ್ಲಿ ರೂ. 1380.21 ಲಕ್ಷಗಳು
2002–02003ನೇ ಸಾಲಿನಲ್ಲಿ ರೂ.. 1661.18 ಲಕ್ಷಗಳು

ಒಟ್ಟು ರೂ. 4580.35 ಲಕ್ಷಗಳು

ಇ) ಇಲ್ಲ.

ಈ) ದರ ಗುತ್ತಿಗೆ ಅವಧಿ ಮುಗಿದಿದ್ದು ಹೊಸ ದರ ಗುತ್ತಿಗೆ ನಿರ್ಧರಿಸುವ ಕಾರ್ಯ ಅಂತಿಮ ಹಂತದಲ್ಲಿದೆ. ತಾತ್ಕಾಲಿಕವಾಗಿ ಔಷಧ ಮತ್ತು ಔಷಧೇತರ ವಸ್ತುಗಳನ್ನು ಒದಗಿಸಿಕೊಳ್ಳುವಲ್ಲಿ ಸ್ವಲ್ಪ ವ್ಯತ್ಯಾಯ ಉಂಟಾಗಿದೆ. ಆದಾಗ್ಯೂ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ತೊಂದರೆಯಾಗುಬಾರದೆಂಬ ದೃಷ್ಟಿಯಿಂದ ಔಷಧ ಮತ್ತು ಔಷಧೇತರ ವಸ್ತುಗಳನ್ನು ಖರೀದಿಸಿ ಉಪಯೋಗಿಸಿಕೊಳ್ಳಲಾಗುತ್ತಿದೆ.

ಉ) ಬಡರೋಗಿಗಳಿಗೆ ಯಾವುದೇ ರೀತಿಯ ತೊಂದರೆ ಬರದಂತೆ ಔಷಧಿ ಮತ್ತು ಔಷಧೇತರ ವಸ್ತುಗಳನ್ನು ಖರೀದಿಸಿ ಒದಗಿಸಲಾಗುತ್ತಿದೆ.

**ಕಾಗವಾಡದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆ ಹರಿಸುವುದು**

4048 (4581) : ಶ್ರೀ ಭರಮಗೌಡ ಅ. ಕಾಗೆ (ಕಾಗವಾಡ) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾಗವಾಡ ಹಾಗೂ ಅಥಣಿ ಕ್ಷೇತ್ರಗಳಲ್ಲಿ ಸಾಕಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನ ಅಭಾವ ಹೆಚ್ಚಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಇದುವರೆವಿಗೂ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಈ ಪ್ರದೇಶಗಳಲ್ಲಿ ಶಾಶ್ವತವಾಗಿ ಕುಡಿಯುವ ನೀರು ಒದಗಿಸಲು ಯಾವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ;

ಶ್ರೀ ಕೆ.ಬಿ. ಕೋಳಿವಾಡ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಬಂದಿದೆ.

ಆ) ಸಮಸ್ಯಾತ್ಮಕ 27 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಹಾಗೂ ಅವಶ್ಯಕತೆಗನುಗುಣವಾಗಿ 38 ಕೊಳವೆ ಬಾವಿಗಳನ್ನು ಸದರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಕೊರೆಯಲಾಗಿದೆ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಮುಂದುವರೆದ ಯೋಜನೆಗಳನ್ನು ಪೂರ್ಣಗೊಳಿಸಲು, ಯೋಜೆಗಳನ್ನು ಪುನಶ್ಚೇತನಗೊಳಿಸಲು, ಕೊಳವೆ ಬಾವಿಗಳ ಆಳ ಹೆಚ್ಚಿಸುವುದು ಮತ್ತು ತೆರೆದ ಬಾವಿಗಳನ್ನು ನಿರ್ಮಾಣ ಮಾಡುವಂತಹ ಕಾಮಗಾರಿಗಳನ್ನು ಆದ್ಯತೆ ಮೇಲೆ ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಸಮತ್ಮಕ ಗ್ರಾಮಗಳಿಗೆ ನದಿ ಮೂಲ ಆದರಿಸಿ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಜಲನಿರ್ಮಲ/ಸ್ವಜಲಧಾರ ಕಾರ್ಯಕ್ರಮದಡಿ 5 ಕಾಮಗಾರಿಗಳನ್ನು ಪ್ರಸ್ತಾಪಿಸಲಾಗಿದೆ.